ಸಾಕ್ಷಿಯನ್ನು ದಿನಾಂಕಃ 29-12-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀಸವಾಲುಃ- ಆರೋಪಿ ಪರ ವಕೀಲರಾದ ಶ್ರೀ ಸಿ. ಜಿ.ಯವರಿಂದಃ**

ಚಂದಾವರದಲ್ಲಿ ನಾನು ಹಾರ್ಡವೇರ್ ಶಾಪ್ ಇಟ್ಟುಕೊಂಡಿದ್ದೇನೆ. ಸದರಿ ಶಾಪನ್ನು ಬೆಳಿಗ್ಗೆ 8-30 ಕ್ಕೆ ತೆರೆಯುತ್ತೇನೆ, ಸಂಜೆ 07-00 ಗಂಟೆಗೆ ಮುಚ್ಚುತ್ತೇನೆ. ನನ್ನ ಹಾರ್ಡವೇರ್ ಶಾಪನಿಂದ ನೂರಾನಿ ಕ್ರಾಸ್ ಸುಮಾರು ಒಂದು ಕಿಲೋಮೀಟರ್ ದೂರದಲ್ಲಿದೆ. ನೂರಾನಿ ಕ್ರಾಸನಿಂದ ಕಟ್ಟಿಗೆ ಸಾಮಿಲ್ ಸುಮಾರು 70 ಮೀಟರ್ ದೂರದಲ್ಲಿದೆ. ಆ ದಿನ ನಾನು ಸಂಜೆ 06-30 ಕ್ಕೆ ಹಾರ್ಡವೇರ್ ಶಾಪನ್ನು 06-30 ಕ್ಕೆ ಮುಚ್ಚಿ ನೂರಾನಿ ಕ್ರಾಸ್ ಹತ್ತಿರ ಹೋಗಿರುತ್ತೇನೆ. ಕಟ್ಟಿಗೆ ಸಾಮಿಲ್ ರಸ್ತೆಯ ಪೂರ್ವದಿಕ್ಕಿಗೆ ಇದೆ. ಹೊನ್ನಾವರದಿಂದ ಹೋಗುವಾಗ ರಸ್ತೆಯ ಎಡಬದಿಗೆ ಕಟ್ಟಿಗೆಯ ಸಾಮಿಲ್ ಇದೆ. ಆ ದಿನ ನಾನು ಚಂದಾವರದ ಕಡೆಗೆ ಮುಖಮಾಡಿ ನಿಂತುಕೊಂಡು ಮಾತನಾಡುತ್ತಿದ್ದೆ. ಸಾಮಿಲ್ ಹತ್ತಿರ ಬಂದಾಗ 07-00 ಗಂಟೆ ಆಗಿತ್ತು. ಹೊನ್ನಾವರದಿಂದ ಹೋಗುವಾಗ ರಸ್ತೆಯ ಎಡಬದಿಗೆ ಕಲ್ಲಿನ ಕಂಪೌಂಡ್ ಇದೆ. ಯಾವುದೇ ಅಂಗಡಿಗಳು ಇಲ್ಲ. ನಾನು ಸಾಮಿಲ್ ಹತ್ತಿರ ಹೋದಾಗ ಅದನ್ನು ಮುಚ್ಚಲಾಗಿತ್ತು. ಕಟ್ಟಿಗೆ ಸಾಮಿಲ್ ಹತ್ತಿರ ನಾನು ಹೋಗಿದ್ದಾಗ ನನ್ನ ಮತ್ತು ಚಾಸಾ-6 ಬಿಟ್ಟು ಬೇರೆ ಯಾರೂ ಇರಲಿಲ್ಲ. ಅಪಘಾತ ಕಾಲಕ್ಕೆ ಸ್ವಲ್ಪ ಕತ್ತಲಿತ್ತು. ಅಪಘಾತವು ಹರಿಜನ ಕೇರಿ ರಸ್ತೆ ಹತ್ತಿರ ಆಗಿರುತ್ತದೆ. ದೂರಿನಲ್ಲಿ ಅದನ್ನೇ ಬರೆದಿದ್ದೇನೆ. ನಾನು ಅಪಘಾತ ಸ್ಥಳದಿಂದ ಸುಮಾರು 70 ಮೀಟರ್ ದೂರದಲ್ಲಿ ನಿಂತಿದ್ದೆ. ಆ ದಿನ ನಾನು ಚಂದಾವರ ಕಡೆಗೆ ಮುಖ ಮಾಡಿ ನಿಂತಿದ್ದೆ. ಅಪಘಾತ ಸ್ಥಳಕ್ಕೆ ನಾನೇ ಮೊದಲು ಹೋಗಿರುತ್ತೇನೆ. ನಾನು ಹೋದ ನಂತರ ಬೇರೆ ಜನರು ಬಂದಿರುತ್ತಾರೆ. ಅಪಘಾತ ಆಗುವ ಮೊದಲು ಆರೋಪಿಯ ಬೈಕ್ ಬರುತ್ತಿದ್ದುದನ್ನು ನಾನು ನೋಡಲಿಲ್ಲ. ಅಪಘಾತ ಆದ ನಂತರ ನೋಡಿರುತ್ತೇನೆ. ನಾನು ನೋಡಿದಾಗ ಗಣೇಶ ತಿಮ್ಮು ಗೌಡರ ತಲೆಗೆ ಪೆಟ್ಟಾಗಿತ್ತು. ನಾನು ಸ್ಥಳಕ್ಕೆ ಹೋದಾಗ ಎರಡೂ ಬೈಕುಗಳ ಇಂಜಿನ್

ಚಾಲ್ತಿಯಲ್ಲಿತ್ತು. ಗಣೇಶ ಗೌಡರವರ ಬೈಕಿಗೆ ಯಾವುದೇ ಇಂಡಿಕೇಟರ್ ಹಾಕಿರಲಿಲ್ಲ. 1 ನೇ ಆರೋಪಿಯ ಬೈಕು ಮೃತ ಗಣೇಶ ಗೌಡರವರ ಬೈಕಿನ ಬಲಬದಿಯ ಬಂಪರಗೆ ಡಿಕ್ಕಿಪಡಿಸಿರುತ್ತದೆ. ಅಪಘಾತ ಆದ ಸ್ಥಳದಲ್ಲೇ ಎರಡೂ ಜನ ಬೈಕ್ ಸವಾರರು ಬಿದ್ದಿದ್ದರು. ಬೈಕುಗಳು ಸುಮಾರು 5 ಮೀಟರ್ ದೂರದಲ್ಲಿ ಬಿದ್ದಿದ್ದವು. ಅರೆಅಂಗಡಿಯಿಂದ ಚಂದಾವರದ ಕಡೆಗೆ ಬರುವಾಗ ಅಪಘಾತವಾದ ಸ್ಥಳದಲ್ಲಿ ಬಲಬದಿಗೆ ಹೋಗಲು ಯಾವುದೇ ಅಡ್ಡರಸ್ತೆ ಇರುವುದಿಲ್ಲ. ಅಪಘಾತ ಆದ ಸ್ಥಳದ ಹತ್ತಿರ ಸುಮಾರು ಒಂದು ಕಿಲೋಮೀಟರಗಿಂತಲೂ ಹೆಚ್ಚು ರಸ್ತೆ ನೇರವಾಗಿದೆ. ಅಪಘಾತವಾದ ಸ್ಥಳದಲ್ಲಿ ಎರಡೂ ಬೈಕಿನ ಇಂಡಿಕೇಟರ್ ಪೀಸಗಳು ಬಿದ್ದಿದ್ದವು. ಮತ್ತೇನು ಬಿದ್ದಿತ್ತು ನಾನು ಗಮನಿಸಲಿಲ್ಲ. ಸ್ಥಳದಲ್ಲಿ ಗಣೇಶ ಗೌಡರವರ ರಕ್ತ ಬಿದ್ದಿತ್ತು. ಗಾಯಾಳುವನ್ನು ನಾನು ಮತ್ತು ಚಾಸಾ-6 ಆ್ಯಂಬುಲನ್ಸ ಮೂಲಕ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ದೂರನ್ನು ನಾನೇ ಕೈಯಲ್ಲಿ ಬರೆದುಕೊಟ್ಟಿರುತ್ತೇನೆ. ಮೃತ ವ್ಯಕ್ತಿ ಮತ್ತು ನಾನು ಒಂದೇ ಜಾತಿಯವರು ಮತ್ತು ಪರಿಚಯ ಎಂದರೆ ಸರಿ. ಪೋಲೀಸರಿಗೆ ನಾನು ಮರುಹೇಳಿಕೆ ನೀಡಿದ್ದೇನೆ.

ಅಪಘಾತ ಆದ ಮರುದಿನ ಪಂಚನಾಮೆ ಮಾಡಲಾಗಿರುತ್ತದೆ. ಅಪಘಾತ ಸ್ಥಳವನ್ನು ಪೋಲೀಸರಿಗೆ ನಾನೇ ತೋರಿಸಿರುತ್ತೇನೆ. ಪಂಚರನ್ನು ಪೋಲೀಸರು ಕರೆದುಕೊಂಡು ಬಂದಿದ್ದರು. ಪಂಚನಾಮೆಯ ಕಾಲಕ್ಕೆ ಎರಡೂ ಬೈಕುಗಳನ್ನು ಪೋಲಿಸರು ಅಮಾನತ್ತುಪಡಿಸಿಕೊಂಡಿರುತ್ತಾರೆ. ಬೈಕಗಳು ಅಪಘಾತ ಸ್ಥಳದಲ್ಲಿಯೇ ರಸ್ತೆಯ ಒಂದು ಕಡೆನಿಲ್ಲಿಸಲಾಗಿತ್ತು. ಅಪಘಾತ ಸ್ಥಳದಲ್ಲಿ ಯಾವುದೇ ಬೈಕಿನ ಟಯರ ಮಾರ್ಕಗಳು ಇರಲಿಲ್ಲ. ಸ್ಥಳದಲ್ಲಿ ಬೈಕಗಳು ಬಿದ್ದ ಮಾರ್ಕಗಳು ಇದ್ದವು, ಬೇರೆ ಗುರುತುಗಳು ಇರಲಿಲ್ಲ. ಪಂಚನಾಮೆಯ ಕಾಲಕ್ಕೆ ಸ್ಥಳದಲ್ಲಿ ರಕ್ತದ ಕಲೆಗಳು ಇರಲಿಲ್ಲ. ಪೋಲೀಸ್ ಠಾಣೆಯಲ್ಲಿ ಪಂಚನಾಮೆಗೆ ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನಾನು ಅಪಘಾತವನ್ನು ಕಣ್ಣಾರೆ ನೋಡಿಲ್ಲ ಎಂದರೆ ಸರಿಯಲ್ಲ. ಮೃತ ಪರಿಚಯದವನಾದ್ದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿರುವ ಸ್ಥಳದಲ್ಲಿ ಯಾವುದೇ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**